A.—SRI ALUR HANUMANTHAPPA (Deputy Minister for Minor Irrigation) .—

(*a*) Rs. 13,49,942.
(*b*) 2,034 acres.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಈಗ ಉತ್ತರದಲ್ಲಿ 13 ಲಕ್ಷ ಚಿಲ್ಲರೆ ಖರ್ಚು ಮಾಡಿದ್ದೀರಿ ಎಂದು ಇದೆ. ಇದರಲ್ಲಿ ಯಾವ ಕೆರೆಗಳು ಮುಗಿದಿವೆ ? ಎಷ್ಟೆಷ್ಟು ಕೆಲಸಗಳು ಆಗಿವೆ ? ಯಾವುವು ಅಚ್ಚುಕಟ್ಟಿಗೆ ಬಂದಿವೆ ಎಂಬುದರ ವಿವರ ಕೊಡುತ್ತೀರಾ ?

†ಶ್ರೀ ಆಲೂರು ಹನುಮಂತಪ್ಪ.—62-63 ನೇ ಸಾಲಿನ ಕೆಲಸ ತೆಗೆದುಕೊಂಡದ್ದು ಮತ್ತು ಮುಗಿಸಿರತಕ್ಕದ್ದು ಒಂದು ಪಟ್ಟಿ ಇಲ್ಲಿ ಇದೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ತಾವು ಎರಡು ಸಾವಿರ 34 ಎಕರೆ ಎಂದು ಹೇಳಿದ್ದೀರಿ. ಇತ್ತೀಚೆಗೆ ಕೇವಲ 150 ಎಕರೆಯಾಗಿರುವುದು ಒಪ್ಪಿಕೊಳ್ಳುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ತೆಗೆದುಕೊಂಡಿರತಕ್ಕ ಹಣವನ್ನು ಸರಿಯಾಗಿ ಖರ್ಚು ಮಾಡುವುದು ಮುಖ್ಯ. 62-63, 63-64, 64-65ನೇ ಸಾಲಿನಲ್ಲಿ ಒಟ್ಟು 13 ಲಕ್ಷದ 49 ಸಾವಿರ 942 ರೂಪಾಯಿ ಖರ್ಚು ಮಾಡಿದ್ದೇವೆ. ಇದರಿಂದ 2,403 ಎಕರೆ ನೀರಾವರಿಯಾಗಿದೆ. ಅದನ್ನು ಉತ್ತರದಲ್ಲಿ ಕೊಟ್ಟಿದೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಈಗ 62-63 ರಿಂದ ತಾವು ತೆಗೆದುಕೊಂಡ ಪ್ರತಿಯೊಂದು ಕೆಲಸ ಕೂಡ ಕುಂಠಿತವಾಗಿ, ಕೇವಲ 150ನ್ನು ಬಿಟ್ಟರೆ, ಬೇರೆ ಯಾವುದೂ ಅಚ್ಚುಕಟ್ಟಿಗೆ ಬಂದಿಲ್ಲ ಎನ್ನುವುದನ್ನು ತಾವು ಒಪ್ಪಿಕೊಳ್ಳುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಅದು ಸರಿಯಾದ ಅಭಿಪ್ರಾಯವಲ್ಲ.

ಶ್ರೀ ಜಿ. ರಾಮೇಗೌಡ.—ಸ್ಪಿಲ್‌ಓವರ್ ಕೆಲಸದ ನೆಪ ಇಟ್ಟುಕೊಂಡು ಕೆಲಸ ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಆ ಅಂಶವನ್ನು ಪರಿಗಣಿಸದೆ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಸ್ಪಿಲ್‌ಓವರ್ ನೆಪದಿಂದ ಕೆಲಸವೇನೂ ಕುಂಠಿತವಾಗಿಲ್ಲ. ಈಗ ಹಲವಾರು ಕಡೆ ಆ ಕೆಲಸಗಳನ್ನು ಮಾಡಿದ್ದೇವೆ. 23 ಕೋಟಿಯ ಸ್ಪಿಲ್ ಓವರ್ ಕೆಲಸ ಇದೆ. ಈ ವರ್ಷದಲ್ಲಿ 10 ಕೋಟಿಯಷ್ಟು ತೆಗೆದುಕೊಂಡಿದ್ದೇವೆ. ಇದರ ಜೊತೆಗೆ 4 ಕೋಟಿ 50 ಸಾವಿರದ ಹೊಸ ಕೆಲಸ ಕೂಡ ತೆಗೆದುಕೊಂಡಿದ್ದೇವೆ. ಇದನ್ನು ಜೂನ್ 67ರ ಒಳಗೆ ಮುಗಿಸತಕ್ಕ ಫೇಸ್‌ಡ್ ಪ್ರೋಗ್ರಾಮ್ ಹಾಕಿಕೊಂಡಿದ್ದೇವೆ.

FLOOD DAMAGE WORKS

**Q.*—246. SRI H. R. KESHAVA MURTHY (Gandasi) .—

Will the Government be pleased to state :—

(*a*) the number of flood damage works reported by the Assistant Engineers of Arsikere, Channarayapatna and Hassan Taluks during the last three years ;

(*b*) the number and the names of works taken up for execution together with their estimated cost ;

(*c*) the number of works for which estimates have been prepared, but not taken up ;

(*d*) the number of works for which estimates have not been prepared ;

(*e*) the grant received from the Centre to tackle the flood damages in the above taluks ;

(*f*) the time required to take up all the works of the above-mentioned taluks ?

A.—Sri ALUR HANUMANTHAPPA (Deputy Minister for Minor Irrigation) .—

(*a*) *Vide* Statement 'A' placed on the Table of the House*
(*b*) *Vide* Statement 'B' placed on the Table of the House*
(*c*) *Vide* Statement 'C' placed on the Table of the House*
(*d*) *Vide* Statement 'D' placed on the Table of the House*
(*e*) Nil.
(*f*) Likely to be completed by the end of March 1966.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಫ್ಲಡ್ ಡ್ಯಾಮೇಜ್ ವರ್ಕ್ಸ್ ಮತ್ತು ಫ್ಲಡ್ ಪ್ರೊಟೆಕ್ಷನ್ ವರ್ಕ್ಸ್ ತೆಗೆದುಕೊಳ್ಳುವುದಕ್ಕೆ ನಮ್ಮ ರಾಜ್ಯಕ್ಕೆ ಕೇಂದ್ರದಿಂದ ಏನೂ ದುಡ್ಡು ಬಂದಿಲ್ಲವೆ, ಬಂದಿದ್ದರೆ ಎಷ್ಟು ಬಂದಿದೆ ?

† ಶ್ರೀ ಆಲೂರು ಹನುಮಂತಪ್ಪ.—ಮೂರನೆಯ ಯೋಜನೆಯಲ್ಲಿ ಇದಕ್ಕಾಗಿ ಯಾವ ಹಣವನ್ನೂ ಕೊಡಲಿಲ್ಲ. ಅಂಥದ್ದರಲ್ಲಿ ನೀರಾವರಿ ಯೋಜನೆಯಲ್ಲಿರತಕ್ಕ 2 ಲಕ್ಷ ರೂಪಾಯಿಗಳನ್ನು ಸಣ್ಣ ಪುಟ್ಟ ಫ್ಲಡ್ ಡ್ಯಾಮೇಜ್ ವರ್ಕ್ಸ್‌ಗೆ ಉಪಯೋಗಿಸಿದ್ದೇವೆ. ಅದರಲ್ಲಿಯೂ ಮೂರು ನಾಲ್ಕು ವರ್ಷಗಳಲ್ಲಿ ರಾಜ್ಯಾದ್ಯಂತ ಸುಮಾರು 900 ಕೆರೆಗಳು ಒಡೆದಿದ್ದುದನ್ನು ಸುಮಾರು 163 ಲಕ್ಷ ರೂಪಾಯಿ ಖರ್ಚು ಮಾಡಿ ಬ್ರೀಚ್ ಫಿರ್ ಮಾಡಿದ್ದೇವೆ ಮತ್ತು ಸಣ್ಣಪುಟ್ಟ ರಿಪೇರಿಗಳನ್ನು ಮಾಡಿದ್ದೇವೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಲಸ್ಸ್‌ನಲ್ಲಿ ಕೆಲವು ಕೈ ಬಿಟ್ಟಿವೆ. ಅರಸೀಕೆರೆ ಮತ್ತು ಚನ್ನರಾಯಪಟ್ಟಣ ತಾಲ್ಲೂಕಿನ ಕೆಲಸಗಳನ್ನು ಯಾವಾಗ ತೆಗೆದುಕೊಳ್ಳುತ್ತೀರಿ ?

ಶ್ರೀ ಆಲೂರು ಹನುಮಂತಪ್ಪ.—ಈ ಕೆರೆಗಳನ್ನೆಲ್ಲ 1965ರ ನವಂಬರ್‌ರಿಂದ ಪಬ್ಲಿಕ್ ವರ್ಕ್ಸ್ ಇಲಾಖೆಗೆ ತೆಗೆದುಕೊಂಡಿದ್ದೇವೆ. ಕೆಲವಾರು ವರ್ಷಗಳಿಂದ ಅಂಕೆ ಅಂಶಗಳನ್ನು ಸಿದ್ಧಪಡಿಸಿಕೊಂಡಿದ್ದೇವೆ. ಎಲ್ಲೆಲ್ಲಿ ಕೆರೆಗಳು ಒಡೆದಿವೆ ಅಂಥ ಕೆರೆಗಳ ದುರಸ್ತಿ, ಬ್ರೀಚ್ ಫಿಲಿಂಗ್, ಈಗಾಗಲೇ ಮಾಡಿದ್ದೇವೆ. ಮೂರನೆಯ ಯೋಜನೆಯಲ್ಲಿ ನಮ್ಮ ರಾಜ್ಯ ಸರ್ಕಾರಕ್ಕೆ ಕೇಂದ್ರದಿಂದ ಫ್ಲಡ್ ಪ್ರೊಟೆಕ್ಷನ್‌ಗಾಗಿ ಯಾವ ಹಣದ ಸೌಕರ್ಯವೂ ಬಂದಿಲ್ಲ. ನಾಲ್ಕನೆಯ ಯೋಜನೆಗೆ 14 ಕೋಟಿ ರೂಪಾಯಿ ಯೋಜನೆಯನ್ನು ತಯಾರಿಸಿ ಕೊಟ್ಟಿದ್ದೇವೆ. ಎಷ್ಟರಮಟ್ಟಿಗೆ ಹಣಕಾಸಿನ ಸಹಾಯ ಬರುತ್ತದೆ ಎನ್ನುವುದನ್ನು ನಿರೀಕ್ಷೆ ಮಾಡುತ್ತಿದ್ದೇವೆ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಒಡೆದು ಹೋದ ಕೆರೆಗಳನ್ನು ಎಂದರೆ 1964ನೇ ನವಂಬರ್ ತಿಂಗಳಿನಿಂದೀಚೆಗೆ ಒಡೆದು ಹೋದ ಕೆರೆಗಳನ್ನು ಮಾತ್ರ ತೆಗೆದುಕೊಳ್ಳುತ್ತಿದ್ದೀರಿ. ಅದಕ್ಕೆ ಹಿಂದೆ ಒಡೆದು ಹೋಗಿರುವ ಕೆರೆಗಳನ್ನು ತೆಗೆದುಕೊಳ್ಳುತ್ತಿಲ್ಲ. ನಾಲ್ಕನೆಯ ಯೋಜನೆಯಲ್ಲಾ ಹಿಂದೆ ಒಡೆದು ಹೋಗಿರುವ ಕೆರೆಗಳನ್ನೂ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡುತ್ತೀರಾ ಹೇಗೆ ?

ಶ್ರೀ ಆಲೂರು ಹನುಮಂತಪ್ಪ.—ಹಿಂದೆ ಕೆಲವಾರು ಸಂದರ್ಭಗಳಲ್ಲಿ ಈ ಮಾನ್ಯ ಸಭೆಯಲ್ಲಾ ಹೇಳಿದ್ದೇನೆ. ಯಾವ ಅಡ್ಡಿ ಆತಂಕಗಳೂ ಇಲ್ಲದೆ ಒಡೆದು ಹೋದ ಕೆರೆಗಳನ್ನು ಅತಿ ಜರೂರಾಗಿ ತೆಗೆದುಕೊಂಡು ರಿಂಗ್ ಬಂಡ್ ಹಾಕಿ ಆ ವರ್ಷದ ಬೆಳೆಗೇ ನೀರನ್ನು ಕೊಡತಕ್ಕ ವ್ಯವಸ್ಥೆ ಮಾಡಬೇಕೆಂದು ಸರ್ಕಾರ ಆದೇಶವನ್ನು ತನ್ನ ಅಧಿಕಾರಿಗಳಿಗೆ ಕೊಟ್ಟಿದೆ. ಎಲ್ಲ ಕೆರೆ ಏರಿಗೆ ಹೆಚ್ಚು ಮಳೆಯ ಕಾರಣದಿಂದ ಸ್ವಲ್ಪಮಟ್ಟಿಗೆ ಜಖಂ ಆಗಿದೆ ಅವು ರಿಪೇರಿ ಆಗಬೇಕಾಗಿವೆ. ಅಂಥ ಕೆಲಸಕಾರ್ಯಗಳು ನಿಂತಿರಬಹುದು. ಅದಕ್ಕೆ ಸಹ ರೆಸ್ಟೊರೇಷನ್‌ನಲ್ಲಿ ಅದ್ಯತೆಯನ್ನು ಕೊಟ್ಟು ಕೆಲಸ ಮಾಡಬೇಕೆಂದು ತಿಳಿಸಿದೆ.

ಶ್ರೀ ಭಾನ್ಕರ ಶೆಟ್ಟಿ.—ಮೂರನೆಯ ಯೋಜನೆಯಲ್ಲಿ ಪ್ರಪಾಹದ ಹತೋಟಿಗೆ ಹಣ ಬೇಕೆಂದು ಆಗಿಂದಾಗ್ಗೆ ಕೇಂದ್ರವನ್ನು ಒತ್ತಾಯ ಮಾಡಿಲ್ಲ ಎನ್ನುವುದು ಸರ್ಕಾರದ ತಿಳುವಳಿಕೆಗೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಸರ್ಕಾರ ಒತ್ತಾಯ ಮಾಡಿದೆ. ಆದರೆ ಮೂರನೆಯ ಯೋಜನೆಯಲ್ಲಿ ಫ್ಲಡ್ ಪ್ರೊಟೆಕ್ಟಿವ್ ವರ್ಕ್ಸ್‌ಗೆ ಹಣ ನಮಗೆ ದೊರೆಯಲಿಲ್ಲ.

Sri K. LAKKAPPA.—Is it not a fact that Central assistance for flood damages has lapsed on account of not taking action last year ?

Sri ALUR HANUMANTHAPPA.—It is absolutely incorrect.

---

*Copies placed in the Mysore Legislature Secretariat Library Nos. 23, Dated 9th April 1966.